**ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಪರಾಧಿಕ ಪ್ರಕರಣ ಸಂಖ್ಯೆ:- 635/2023**

ಇವರೊಳಗೆ:

ಕರ್ನಾಟಕ ಸರ್ಕಾರದ ಪರವಾಗಿ ಎಂ.ಕೆ ದೊಡ್ಡಿ ಆರಕ್ಷಕ ಉಪನಿರೀಕ್ಷಕರು ..... ಪಿರ್ಯಾದಿ

ಮತ್ತು

ಆನಂದ ಎನ್. ಮತ್ತು ಇತರರು ..... ಆರೋಪಿಗಳು

**ದೋಷಾರೋಪಣೆ**

**ಶ್ರೀ ವೆಂಕಟೇಶಪ್ಪ ವಿ., ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಪಟ್ಟಣ**

**1.** ಆನಂದ ಎನ್., ಬಿನ್ ನಾಗರಾಜು
ವಯಸ್ಸು **33** ವರ್ಷ

**2.** ನಾಗರಾಜ, ಬಿನ್ ಲೇಟ್ ಕೆಂಪಹೆಗ್ಗಡೆ
ವಯಸ್ಸು **66** ವರ್ಷ
**ಇಬ್ಬರ ವಿಳಾಸ.** ನಂ.1830ಎ, ರಾಮಮಂದಿರ ಬೀದಿ,
13ನೇ ಕ್ರಾಸ್, ಮಂಗಳವಾರಪೇಟೆ,
ಚನ್ನಪಟ್ಟಣ ಟೌನ್, ರಾಮನಗರ

**ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆಗಳನ್ನು ಹೊರಸುತ್ತೇನೆ.**

ದಿನಾಂಕ: **20.07.2023** ರಂದು ಬೆಳಿಗ್ಗೆ **11.00** ಗಂಟೆಯಿಂದ ಮಧ್ಯಾಹ್ನ **12.00** ಗಂಟೆಯ ಸಮಯದಲ್ಲಿ ಎಂ.ಕೆ ದೊಡ್ಡಿ ಪೊಲೀಸ್ ಠಾಣಾ ಸರಹದ್ದು, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಹೊಸೂರು ದೊಡ್ಡಿ ಗ್ರಾಮದಲ್ಲಿರುವ ಶ್ರೀ ದೊಡ್ಡಬೀರೇಶ್ವರ ದೇವಸ್ಥಾನದ ಗರ್ಭಗುಡಿಗೆ ಚಾಸಾ-**1** ರವರು ಪೂಜೆಯನ್ನು ಮಾಡಲು ಹೋದಾಗ **1** ಮತ್ತು **2**ನೇ ಆರೋಪಿಗಳಾದ ನೀವು ಚಾಸಾ-**1** ರವರನ್ನು ಕುರಿತು ಏಕೆ ನೀನು ಗರ್ಭಗುಡಿಗೆ ಹೋಗಿದ್ದೀಯಾ? ಯಾರ ಅನುಮತಿಯನ್ನು ಪಡೆದುಕೊಂಡು ನೀನು ದೇವಸ್ಥಾನದ ಗರ್ಭಗುಡಿಗೆ ಹೋಗಿದ್ದೀಯಾ? ಹೊರಗೆ ಬಾ ಇಲ್ಲದಿದ್ದರೆ ನಾವೇ ಬಂದು ಹೊರಗೆ ಎಳೆದುಕೊಂಡು ಬರುತ್ತೇವೆ ಎಂದು ಕರೆದಾಗ ಚಾಸಾ-**1** ರವರು ನನಗೆ ಏಕೆ ಕರೆಯುತ್ತಿದ್ದೀರಿ ನಾನು ಪೂಜೆಯನ್ನು ಮಾಡಿಕೊಂಡು ಹೋಗುತ್ತೇನೆಂದು ಹೇಳಿದಾಗ

**1. 1 ಮತ್ತು 2ನೇ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ,** ಕೈಗಳಿಂದ ಚಾಸಾ-**1** ರವರ ಮುಖದ ಮೇಲೆ ಮೈ ಮೇಲೆ ಹೊಡೆದು ನೋವುಂಟು ಮಾಡಿ **1ನೇ** ಆರೋಪಿಯಾದ ನೀವು ಚಾಸಾ-**1** ರವರನ್ನು ಎಳೆದುಕೊಂಡು ಹೋಗಿ ನವಗ್ರಹದ ಗೊಡೆಗೆ ಸೇರಿಸಿಕೊಂಡು ಕೈಗಳಿಂದ ಮುಖದ ಮೇಲೆ ಮೈಮೇಲೆ ಹೊಡೆದು ನೋವುಂಟು ಮಾಡಿ

ಚಾಸಾ-**1** ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.**323 r/w 34** ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

**2. ಮುಂದುವರೆದಂತೆ, 1ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ,** ಚಾಸಾ-**1** ರವರನ್ನು ಹಿಡಿದು ಎಳೆದುಕೊಂಡು ಬಂದು ಚಾಸಾ-**1** ರವರನ್ನು ಕುರಿತು ಬೋಳಿ ಮಗನೇ ಸೂಳೆ ಮಗನೇ ಯಾರ ಅನುಮತಿಯನ್ನು ಪಡೆದುಕೊಂಡು ಒಳಗೆ ಹೋದೆ ಯಾರು ನಿನಗೆ ಒಳಗೆ ಹೋಗಲು ಹೇಳಿದರು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.**504 r/w 34** ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

**3. ಮುಂದುವರೆದಂತೆ, 1ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ,** ಚಾಸಾ-**1** ರವರಿಗೆ ಕಲ್ಲನ್ನು ಎತ್ತಿಕೊಂಡು ಹೊಡೆಯಲು ಹೋದಾಗ ದೇವಸ್ಥಾನಕ್ಕೆ ಬಂದಿದ್ದ ಭಕ್ತಾದಿಗಳು ಕಲ್ಲನ್ನು ಕಿತ್ತು ಬಿಸಾಡಿದಾಗ ಪ್ರಾಣ ಬೆದರಿಕೆಯನ್ನು ಹಾಕಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.**506 r/w 34** ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಆದ್ದರಿಂದ ನೀವು ಮೇಲೆ ಹೇಳಿದ ದೋಷಾರೋಪಣೆಗಳಿಗೆ ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕಃ

**(ವೆಂಕಟೇಶಪ್ಪ ವಿ.)**
ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

R

**ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ**
**ಅಪರಾಧಿಕ ಪ್ರಕರಣ ಸಂಖ್ಯೆಃ 635/ 2023**

ಫಿರ್ಯಾದಿ ಃ ಆರೋಪಿತ

ಅಕ್ಕೂರು ಪೋಲಿಸ್ ಠಾಣೆ ಃ ಎ**1.** ಆನಂದ ಎನ್

| | | |
|---|---|---|
| ಹೆಸರು | ಃ | ಎ**1.** ಆನಂದ ಎನ್ |
| ತಂದೆ/ಗಂಡನ ಹೆಸರು | ಃ | ಬಿನ್ ನಾಗರಾಜು |
| ವಯಸ್ಸು | ಃ | 33 ವರ್ಷ |
| ವಾಸ | ಃ | ನಂ.1830ಎ, ರಾಮಮಂದಿರ ಬೀದಿ,<br>13ನೇ ಕ್ರಾಸ್, ಮಂಗಳವಾರಪೇಟೆ,<br>ಚನ್ನಪಟ್ಟಣ ಟೌನ್, ರಾಮನಗರ |

**ದೋಷಾರೋಪಣೆ**

**ಪ್ರಶ್ನೆ 1.** ನಿಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?
**ಉತ್ತರಃ**

**ಪ್ರಶ್ನೆ 2.** ನಿಮ್ಮ ವಿರುದ್ದ ಮಾಡಲಾದ ಅರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?
**ಉತ್ತರಃ**

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಅರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕಃ

(ವೆಂಕಟೇಶಪ್ಪ ವಿ.)
ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ

**ಚನ್ನಪಟ್ಟಣ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ**
**ಅಪರಾಧಿಕ ಪ್ರಕರಣ ಸಂಖ್ಯೆಃ 635/ 2023**

ಫಿರ್ಯಾದಿ ಃ ಆರೋಪಿತ

ಅಕ್ಕೂರು ಪೋಲಿಸ್ ಠಾಣೆ ಃ ಎ**2.** ನಾಗರಾಜ

| | | |
|---|---|---|
| ಹೆಸರು | ಃ | ಎ**2.** ನಾಗರಾಜ |
| ತಂದೆ/ಗಂಡನ ಹೆಸರು | ಃ | ಬಿನ್ ಲೇಟ್ ಕೆಂಪಹೆಗ್ಗಡೆ |
| ವಯಸ್ಸು | ಃ | 66 ವರ್ಷ |
| ವಾಸ | ಃ | ನಂ.1830ಎ, ರಾಮಮಂದಿರ ಬೀದಿ,<br>13ನೇ ಕ್ರಾಸ್, ಮಂಗಳವಾರಪೇಟೆ,<br>ಚನ್ನಪಟ್ಟಣ ಟೌನ್, ರಾಮನಗರ |

**ದೋಷಾರೋಪಣೆ**

**ಪ್ರಶ್ನೆ 1.** ನಿಮ್ಮ ವಿರುದ್ದ ಮಾಡಲಾದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುತ್ತೀರಾ?
**ಉತ್ತರಃ**

**ಪ್ರಶ್ನೆ 2.** ನಿಮ್ಮ ವಿರುದ್ದ ಮಾಡಲಾದ ಅರೋಪಗಳನ್ನು ಒಪ್ಪುತ್ತೀರಾ ಅಥವಾ ವಿಚಾರಣೆಯಾಗಬೇಕೆನ್ನುತ್ತೀರಾ?
**ಉತ್ತರಃ**

(ದೋಷಾರೋಪಣೆ ತೆರೆದ ನ್ಯಾಯಾಲಯದಲ್ಲಿ ಅರೋಪಿತರಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರಗಳನ್ನು ಅವರದೇ ಭಾಷೆಯಲ್ಲಿ ಈ ದಿನದಂದು ದಾಖಲಿಸಿಕೊಳ್ಳಲಾಯಿತೆಂದು ಈ ಮೂಲಕ ದೃಡೀಕರಿಸಲಾಗಿರುತ್ತದೆ)

ದಿನಾಂಕಃ

(ವೆಂಕಟೇಶಪ್ಪ ವಿ.)
ಹಿ.ಸಿ.ನ್ಯಾ ಮತ್ತು ಪ್ರದ.ನ್ಯಾ.ದಂ., ಚನ್ನಪಟ್ಟಣ